1114 (1095) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಚಿಕೂನ್ ಗುನ್ಯಾ ರೋಗಪೀಡಿತರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

ಆ) ಹುಬ್ಬಳ್ಳಿ–ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಎಷ್ಟು ಜನ ಈ ರೋಗಕ್ಕೆ ಒಳಪಟ್ಟಿರುತ್ತಾರೆ (ವಿವರ ನೀಡುವುದು) ;

ಇ) ಚಿಕೂನ್ ಗುನ್ಯಾ ದಂತಹ ಮಾರಕ ರೋಗವನ್ನು ತಡೆಯಲು ಸರ್ಕಾರ ಮುಂಜಾಗ್ರತವಾಗಿ ಕೈಗೊಂಡ ಕ್ರಮಗಳೇನು ?

ಶ್ರೀ ಆರ್. ಅಶೋಕ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಕಳೆದ ಏಪ್ರಿಲ್ ನಿಂದ ರಾಜ್ಯದ 15 ಜಿಲ್ಲೆಗಳಲ್ಲಿ 64 ಚಿಕೂನ್ ಗುನ್ಯಾ ಪ್ರಕರಣಗಳು ವರದಿಯಾಗಿರುತ್ತದೆ. (ವಿವರಗಳನ್ನು ಲಗತ್ತಿಸಿದೆ).

ಆ) ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಕಳೆದ ಏಪ್ರಿಲ್‌ನಿಂದ ಇಲ್ಲಿಯವರೆಗೆ ಒಂದು ಪ್ರಕರಣ ಚಿಕೂನ್ ಗುನ್ಯಾ ಎಂದು ಖಚಿತ ಪಟ್ಟಿರುತ್ತದೆ.

ಇ) ಸರ್ಕಾರವು ಈ ರೋಗದ ನಿಯಂತ್ರಣಕ್ಕಾಗಿ ತೆಗೆದುಕೊಂಡ ಮುಂಜಾಗ್ರತ ಕ್ರಮಗಳು ಈ ಕೆಳಕಂಡಂತಿರುತ್ತದೆ.

1. ರಾಜ್ಯದ ಎಲ್ಲ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಮಹಾನಗರ ಪಾಲಿಕೆಗಳಿಗೆ ರೋಗದ ನಿಯಂತ್ರಣದ ಬಗ್ಗೆ ಸೂಕ್ತ ಮಾರ್ಗದರ್ಶನಗಳನ್ನು ಸುತ್ತೋಲೆಗಳ ಮೂಲಕ ಕಳುಹಿಸಿಕೊಡಲಾಗಿದೆ.

2. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಭೆಯನ್ನು ಕರೆದು ಕೈಗೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ ಸೂಚನೆಯನ್ನು ನೀಡಲಾಗಿದೆ.

3. ರಾಜ್ಯ ಹಾಗೂ ಜಿಲ್ಲಾ ಮಟ್ಟದ ಕಾರ್ಯಕ್ರಮಾಧಿಕಾರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಅಧಿಕಾರಿಗಳು ಶಂಕಿತ ಪ್ರಕರಣ ವರದಿಯಾದ ಪ್ರದೇಶಗಳಿಗೆ ಬೇಟಿ ನೀಡಿ ನಿಯಂತ್ರಣ ಕ್ರಮಗಳ ಉಸ್ತುವಾರಿ ನಾಗೂ ಮೇಲ್ವಿಚಾರಣೆ ನಡೆಸಿರುತ್ತಾರೆ.

4. ರೋಗಗಳ ಚಿಕಿತ್ಸೆಗಾಗಿ ಜ್ವರ ಪ್ರಕರಣಗಳು ತೀವ್ರವಾಗಿ ವರದಿಯಾದ ಪ್ರದೇಶಗಳಲ್ಲಿ ಸ್ಥಳೀಯವಾಗಿ ಚಿಕಿತ್ಸಾಲಯಗಳನ್ನು ತೆರೆದು, ವೈದ್ಯರುಗಳನ್ನು ನಿಯೋಜಿಸಿ, ದಿನದ 24

ಗಂಟೆಯೂ ತ್ವರಿತ ಚಿಕಿತ್ಸೆ ಸಿಗುವಂತೆ ವ್ಯವಸ್ಥೆ ಮಾಡಲಾಗಿದೆ ಹಾಗೂ ಜೀವರಕ್ಷಕ ಔಷಧಿಗಳ ದಾಸ್ತಾನನ್ನು ಸಾಕಷ್ಟು ಪ್ರಮಾಣದಲ್ಲಿ ಇರಿಸಲಾಗಿದೆ. ಅಲ್ಲದೆ ಆರ್ಯುವೇಧ ವೈದ್ಯರುಗಳು ಇರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಔಷಧ ಚಿಕಿತ್ಸೆಯನ್ನು ಸಹ ನೀಡಲು ವ್ಯವಸ್ಥೆ ಮಾಡಲಾಗಿದೆ.

5. ಸ್ಥಳೀಯವಾಗಿ ಜ್ವರಪೀಡಿತರಿಗೆ ಚಿಕಿತ್ಸೆ ಸಿಗಲು ಅನುಕೂಲವಾಗುವಂತೆ 8840 ಔಷಧಿ ಕೇಂದ್ರಗಳು ಹಾಗೂ 367 ಜ್ವರ ಚಿಕಿತ್ಸಾ ಕೇಂದ್ರಗಳನ್ನು ಸಮಾಜ ಸೇವಕರು, ಸ್ವಯಂ ಸೇವಕರು, ಶಾಲಾ ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಹಾಯದಿಂದ ಸ್ಥಾಪಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ.

6. ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಎಚ್.ಎಂ.) ಅಡಿಯಲ್ಲಿ ಪ್ರತಿಯೊಂದು ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳಿಗೆ ಬಿಡುಗಡೆ ಮಾಡಿರುವ ರೂ. 10,000/– ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬಿಡುಗಡೆಯಾಗಿರುವ ರೂ. 75,000/– ಗಳ ಅನುದಾನದಲ್ಲಿ ನೈರ್ಮಲ್ಯ ಹಾಗೂ ನೀರಿನ ನಿರ್ವಹಣೆ ಸಮರ್ಪಕವಾಗಿ ನಡೆಸಿ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಿರ್ಮೂಲನೆ ಮಾಡಲು ಸೂಚಿಸಲಾಗಿದೆ.

7. ಇದುವರೆಗೆ ತುರ್ತು ಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ 1226 ಧೂಮಿಕರಣ ಯಂತ್ರಗಳು, 3950 ಲೀಟರ್ ಧೂಮೀಕರಣ ಕೀಟನಾಶಕ ದ್ರಾವಣಗಳು ಹಾಗೂ 2500 ಲೀಟರ್ ಲಾರ್ವಾನಾಶಕ ಕೀಟನಾಶಕ ದ್ರಾವಣಗಳನ್ನು ಎಲ್ಲಾ ಸಮಸ್ಯಾತ್ಮಕ ಜಿಲ್ಲೆಗಳಿಗೂ ಸರಬರಾಜು ಮಾಡಲಾಗಿದೆ.

8. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಇತರ ಇಲಾಖಾಧಿಕಾರಿಗಳ ಸಮನ್ವಯ ಸಮಿತಿಯನ್ನು ಕ್ರಮವಾಗಿ ಜಿಲ್ಲಾಧಿಕಾರಿಗಳ ಹಾಗೂ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ರಚಿಸಿ, ಸಭೆಗಳನ್ನು ಕರೆದು, ಪರಿಸ್ಥಿತಿಯ ಪರಿವೀಕ್ಷಣೆ, ಅಧ್ಯಯನ ಹಾಗೂ ಕಾರ್ಯತಂತ್ರ ರೂಪುರೇಷೆಗಳನ್ನು ಯೋಜಿಸಿ, ಅನುಷ್ಠಾನಗೊಳಿಸಲಾಗುತ್ತಿದೆ.

9. ರೋಗದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಹಾಗೂ ಮನೆಗಳಲ್ಲಿ ನೀರು ಶೇಕರಣಾ ತೊಟ್ಟಿಗಳಲ್ಲಿ ಭದ್ರವಾದ ಮುಚ್ಚಳದಿಂದ ಮುಚ್ಚುವ ಬಗ್ಗೆ ಮನೆಗಳ ಮೇಲ್ಚಾವಣಿಯಲ್ಲಿ ಬಿಸಾಡಿದ ತ್ಯಾಜ್ಯವಸ್ತುಗಳಾದ ಹಳೆಯ ಟೈರುಗಳು, ಒಡೆದ ಪ್ಲಾಸ್ಟಿಕ್ ವಸ್ತುಗಳು, ತೆಂಗಿನ ಚಿಪ್ಪು ಮುಂತಾದ ಮಳೆನೀರು ಸಂಗ್ರಹವಾಗುವಂತಹ ಮುಂತಾದವುಗಳನ್ನು ವಿಲೇವಾರಿ ಮಾಡುವ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಪ್ರತಿ ದಿನ ಆಕಾಶವಾಣಿಯಲ್ಲಿ ಪ್ರಚಾರ

ಮಾಡಲಾಗುತ್ತಿದೆ, ಫೋನ್ ಇನ್ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ. ದಿನಪತ್ರಿಕೆಗಳಲ್ಲಿ ಜಾಹಿರಾತು ಭಿತ್ತಿಪತ್ರ/ಕರಪತ್ರಗಳ ಮೂಲಕ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

ರಾಜ್ಯದಲ್ಲಿ ಕಳೆದ ಏಪ್ರಿಲ್ ನಿಂದ ವರದಿಯಾದ ಚಿಕೂನ್ ಗುನ್ಯಾ ಪ್ರಕರಣಗಳ ವಿವರಗಳು

ಕ್ರ.ಸಂಖ್ಯೆ	ಜಿಲ್ಲೆಗಳು	ವರದಿಯಾದ ಚಿಕೂನ್ ಗುನ್ಯಾ ಪ್ರಕರಣಗಳು
1	ದಾವಣಗೆರೆ	2
2	ಉತ್ತರ ಕನ್ನಡ	1
3	ಹಾಸನ	5
4	ಬೆಳಗಾವಿ	14
5	ಮೈಸೂರು	8
6	ಮಂಡ್ಯ	2
7	ಹಾವೇರಿ	2
8	ಧಾರವಾಡ	1
9	ಚಾಮರಾಜನಗರ	1
10	ಚಿಕ್ಕಮಗಳೂರು	1
11	ಕೋಲಾರ	2
12	ತುಮಕೂರು	1
13	ಉಡುಪಿ	1
14	ಗದಗ	1
15	ಬೆಂಗಳೂರು (ನಗರ) (ಬಿಬಿ.ಎಂ.ಪಿ.ವ್ಯಾಪ್ತಿ)	2
ಒಟ್ಟು	15 ಜಿಲ್ಲೆಗಳು	44

ಯುವಕರಿಗೆ ತರಬೇತಿ ನೀಡಲು ಗಿರಿಜನರ ಸಹಾಯ ಪಡೆಯುವ ಬಗ್ಗೆ

1115 (1010) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಯುವಕರಿಗೆ ಕರಕುಶಲ ತರಬೇತಿ ನೀಡಲು ಗಿರಿಜನರ ಸಹಾಯ ಪಡೆಯುವ ಪ್ರಸ್ತಾವನೆ ಏನಾದರೂ ಸರ್ಕಾರದ ಮುಂದೆ ಇದೆಯೇ ; ಹಾಗಿದ್ದಲ್ಲಿ ಈ ಪ್ರಸ್ತಾವನೆಯನ್ನು ಹೇಗೆ ರೂಪಿಸಲಾಗಿದೆ ;

ಆ) ಇಲ್ಲವಾದಲ್ಲಿ, ಗಿರಿಜನ ಯುವಕರಿಗೆ ಪ್ರಯೋಜನಕಾರಿಯಾಗುವಂತಹ ಇಂತಹ ಯೋಜನೆಯನ್ನು ಜಾರಿಗೆ ತರುವುದು ಸೂಕ್ತವಲ್ಲವೇ ?